37

ನಿಮಗೆ ಗೊತ್ತಿದೆಯೇ?

(ದ್ವಿತೀಯ ಮುದ್ರಣ)

*

ಲೇಖಕರು:

ಶ್ರೀ. ಟಿ. ಚಂದ್ರರಾಜ ಸೆಟ್ಟಿ,

ಸಿದ್ಧಕಟ್ಟೆ.

1957.

ಒಂದಾಣೆ 1 ANNA ಮಾಲೆ

ಇಪ್ಪತ್ತಾರು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳು; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಇಪ್ಪತ್ತೇಳು
ಏಕಾಂಕ ನಾಟಕಗಳಲ್ಲಿ ಈ ಕೆಳಗಿನವು (ಇಪ್ಪತ್ತಾರು) ದೊರೆವುವು

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ಡಿ। ಎಮ್. ಎನ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಿಕ)	ಶ್ರೀ। ಬಿ. ದಾಮೋದರ ಬಾಳಿಗ, ಬಿ ಎ
೭	ಮೀರಾಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟಿ ಬಿಟ್ಟ ದಿಟ್ಟ (ಪ್ರಹಸನ)	ಡಾ। ಎಸ್. ಪಿ ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಕೆ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮದ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೩	ಕುಶ-ಲವ ,,	ಶ್ರೀ। ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ। ಟ. ಚಂದ್ರರಾಜ ಸೆಟ್ಟಿ.
೨೫	ವೈರಾಗ್ಯನಿಧಿ (ತರಂಗರೂಪಕ)	ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.

ಟಪ್ಪಾಲು ದ್ವಾರಾ ತರಿಸಲಿಚ್ಛಿಸುವವರು, ಬುಕ್‌ಪೋಸ್ಟ್ ಖರ್ಚು ಕೂಡಿ ಒಟ್ಟು ರೂ. 1-15-0ನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳಿಸತಕ್ಕದ್ದು.

ಒಂದಾಣೆ ಮಾಲೆ

ಪ್ರಭಾತ ಆಫೀಸು :: ರಥಬೀದಿ :: ಮಂಗಳೂರು-೧.

ನಿಮಗೆ ಗೊತ್ತಿದೆಯೆ?

ಅಣು

ಒಂದು ಅಣುವು ಸುಮಾರು $\frac{1}{100,000,000}$ ಇಂಚಿಗಿಂತಲೂ ಚಿಕ್ಕದು.

ಪರಮಾಣುವಿನಲ್ಲಿರುವ ಸೂರ್ಯವ್ಯೂಹದ ಸಾದೃಶ್ಯವನ್ನು ಮೆಂಚೆಸ್ಟರಿನ ವಿದ್ಯಾಲಯದ ಲುಥರ್‌ಫೊರ್ಡ್ ಎಂಬವನು ಬೆಳಕಿಗೆ ತಂದನು.

ಅತಿಸೂಕ್ಷ್ಮವಾದ ಅಣುಜೀವಿಗಳಿಗೆ 'ಬೆಕ್ಟೇರಿಯಾ' ಎನ್ನುವರು. ಸನ್ನಿಪಾತದ ಬೆಕ್ಟೇರಿಯಗಳನ್ನು, ಒಂದು ಇಂಚು ಉದ್ದಕ್ಕೆ ೧೨,೦೦೦ದಂತೆ ಸಾಲಾಗಿ ಇರಬಹುದು.

ಹಾಲಿದ್ದುದು ಮೊಸರಾಗಲು ಅಣುಜೀವಿಗಳೇ ಕಾರಣ.

ಅಧಿಕಾರ

ಭಾರತದಲ್ಲಿ ಪ್ರಥಮ ಸ್ತ್ರೀಗವರ್ನರರು ಶ್ರೀಮತಿ ಸರೋಜಿನಿ ನಾಯುಡುರವರು. ಇವರು ಸಂಯುಕ್ತಪ್ರಾಂತ್ಯದ ಗವರ್ನರರಾಗಿದ್ದು, ೧೯೪೯ನೇ ಮಾರ್ಚಿ ೨ರಲ್ಲಿ ತಮ್ಮ ೭೦ನೆಯ ವಯಸ್ಸಿನಲ್ಲಿ ಕಾಲವಾದರು. ಕವಿಯಿತ್ರಿಯಾಗಿದ್ದ ಇವರಿಗೆ 'ಭಾರತದ ಕೋಗಿಲೆ' ಎಂಬ ಬಿರುದಿತ್ತು.

ಭಾರತ ಗಣರಾಜ್ಯದ ಪ್ರಥಮ ಅಧ್ಯಕ್ಷರು ಬಾಬುರಾಜೇಂದ್ರ ಪ್ರಸಾದರು.

ಭಾರತದ ಪ್ರಥಮ ಮತ್ತು ಕೊನೆಯ ಹಿಂದೀ ಗವರ್ನರ್ ಜನರಲರವರು ಚಕ್ರವರ್ತಿ ರಾಜಗೋಪಾಲಾಚಾರ್ಯರು.

ಮತದಾನಪದ್ಧತಿಯು ೧೮೭೦ರಲ್ಲಿ ಪ್ರಾರಂಭವಾಯಿತು.

ಅಮೇರಿಕದ ಸ್ತ್ರೀಯರು ಅಧ್ಯಕ್ಷ ಚುನಾವಣೆಯಲ್ಲಿ ಓಟು ಕೊಡಲು ೧೯೨೦ರಲ್ಲಿ ಆರಂಭಿಸಿದರು.

೧೯೨೫ರಲ್ಲಿ ವಿಠಲಭಾಯಿ ಪಟೇಲರು ಭಾರತದ ಕೇಂದ್ರ ಎಸೆಂಬ್ಲಿಯಲ್ಲಿ ಪ್ರಥಮ ಹಿಂದೀ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಅಂಚೆಚೀಟು

ಸರ್ ರೋಲೆಂಡ್ ಹಿಲ್ ಎಂಬಾತನು ಬಹಳ ಸಾಹಸಮಾಡಿದ ದರ ಫಲವಾಗಿ ೧೮೪೦ನೇ ಮೇ ೬ರಲ್ಲಿ ವಿಕ್ಟೋರಿಯಾ ಮಹಾರಾಣಿಯ ಮುಖಚಿತ್ರವುಳ್ಳ ಒಂದು ಪೆನ್ನಿ ಬೆಲೆಯ, ಲೋಕದ ಮೊತ್ತಮೊದಲನೆಯ ಅಂಚೆಚೀಟು ಹೊರಟಿತು.

೧೮೫೨ನೇ ಜೂನು ೧ರಲ್ಲಿ ಆ ಕಾಲದ ಸಿಂಧ ಡಿಸ್ಟ್ರಿಕ್ಟಿನ ಕಮಿಶನ ನಾಗಿದ್ದ ಸರ್ ಬಾರ್ಟಲ್ ಫ್ರೆರ್ ಎಂಬವನು ತನ್ನ ಸ್ವಂತ ಉಪಯೋ ಕ್ಕಾಗಿ Sciende District Dawk ಎಂದು ಮುದ್ರೆಯನ್ನೊ ನೀಲಿ ಬಣ್ಣದ ಅರ್ಧಾಣೆಯ ಅಂಚೆಚೀಟುಗಳನ್ನು ಭಾರತದ ಮೊತ್ತ ಮೊದಲನೆಯ ಚೀಟಾಗಿ ಹೊರಡಿಸಿದನು.

ವಿಕ್ಟೋರಿಯಾ ರಾಣಿಯ ಮುಖಮುದ್ರೆಯುಳ್ಳ, ಕಪ್ಪಾಗಿ ಅಚ್ಚಾ ಭಾರತದ ಒಂದು ಅಂಚೆಚೀಟಿಯ ಈಗಿನ ಬೆಲೆಯು ಸಂಗ್ರಹಕಾರ ದೃಷ್ಟಿಯಲ್ಲಿ ೫೦೦೦ ರೂಪಾಯಿ.

ಮೊರಿಸೆಸ್ಸಿನ ಒಂದು ಪೆನ್ನಿಯ ಹಳೆಯ ಅಂಚೆಚೀಟಿಯೊಂದ ಈಗಿನ ಬೆಲೆ ೫೦೦೦ ಪವನುಗಳು.

೧೯೨೬ರ ವರೆಗೆ ಭಾರತದ ಅಂಚೆಚೀಟುಗಳು ಲಂಡನಿನಲ್ಲಿ ಅಚ್ಚಾ ಗುತಿದ್ದವು.

ಕಾಗದ

ಕಾಗದತಯಾರಿಯು ಚೀನಿಯರಿಗೆ ಕ್ರಿ. ಪೂ. ಎರಡು ಶತಮಾನಗ ಮೊದಲೇ ಗೊತ್ತಿತ್ತು.

ಕಾಗದ ತಯಾರುಮಾಡುವ ಯಂತ್ರವನ್ನು ಲೂಯಿ ರಾಬರ್ಟ ಎಂಬ ಫ್ರೆಂಚನು ೧೭೯೦ರಲ್ಲಿ ಕಂಡುಹಿಡಿದನು.

ಇಂಗ್ಲೆಂಡಿನಲ್ಲಿ ವಿಲ್ಲಿಯಂ ಕ್ಯಾಕ್ಸ್ಟನ್ ಎಂಬವನು ೧೪೭೬ರ ಮೊದಲನೆಯದಾಗಿ ಮುದ್ರಣ ನಡಿಸಿದನು.

ಹಿಂದೂದೇಶದಲ್ಲಿ ಮೊದಲು ಅಚ್ಚಾದ ಪುಸ್ತಕವು ಸೈಂಟ್ ಫ್ರಾನ್ಸಿಸ ಕ್ಸೇವಿಯರರ ಧಾರ್ಮಿಕ ಬೋಧೆ ಅದು ಗೋವೆಯಲ್ಲಿ ೧೫೫೭ರ ಅಚ್ಚಾಯಿತು.

ಭಾರತದ ಮೊತ್ತಮೊದಲಿನ ಪತ್ರಿಕೆಯು 'ಬೆಂಗಾಲ್ ಗಜೆಟ್' ಎಂಬುದು. ಅದು ೧೭೮೦ನೆಯ ಜನವರಿಯಲ್ಲಿ ಜೇಮ್ಸ್ ಅಗಸ್ಟಸ್ ಎಂಬವನಿಂದ ಹೊರಡಿಸಲ್ಪಟ್ಟಿತು.

ಭಾರತದಲ್ಲಿ ದೇಶೀಯ ಭಾಷೆಯಲ್ಲಿ ಪ್ರಕಟವಾಗುವ ಅತ್ಯಂತ ಹಳೆಯ ವಾರ್ತಾಪತ್ರಿಕೆ "ಮುಂಬಾಯಿ ಸಮಾಚಾರ" ಎಂಬುದು; ೧೮೧೮ರಲ್ಲಿ ಪ್ರಾರಂಭವಾಯಿತು.

ಪಿಟ್ಮನ್ ಎಂಬ ಆಂಗ್ಲೇಯನು ೧೮೮೭ರಲ್ಲಿ ಸಂಕ್ಷಿಪ್ತ ಲಿಪಿಯನ್ನು (Shorthand) ರಚಿಸಿದನು.

ಖಗೋಳ

ಸೂರ್ಯನ ಮೇಲೆ ಕಲೆಗಳಿರುವುದನ್ನು ೧೬೧೦ರಲ್ಲಿ ಮೊದಲನೆಯದಾಗಿ ಪ್ರೊಫೆಸರ್ ಬ್ರಾಶಿಯರ್ ಎಂಬ ಪಂಡಿತನು ಕಂಡುಕೊಂಡನು. ಅವನು ಆ ಕಲೆಯು ಸುಮಾರು ೧೧೮,೦೦೦ ಮೈಲು ಉದ್ದವೂ, ೩೦,೦೦೦ ಮೈಲು ಅಗಲವೂ ಇರಬಹುದಾಗಿ ತರ್ಕಿಸಿದನು.

ಸೂರ್ಯನು ಚಂದ್ರನಿಗಿಂತ ಸುಮಾರು ೬೦,೦೦೦,೦೦೦ ಪಾಲು ದೊಡ್ಡವನು.

ಜ್ಯೇಷ್ಠಾ ನಕ್ಷತ್ರದ ವ್ಯಾಸ ೪೧ ಕೋಟಿ ಮೈಲು. ೨೩—೯—೧೮೪೬ರಲ್ಲಿ ನೆಪ್ಚೂನ್ ಗ್ರಹವನ್ನು ಪ್ರಥಮವಾಗಿ ಕಂಡುಕೊಂಡರು.

೧೯೧೨ನೆ ಜುಲೈ ೧೨ನೇ ತಾರೀಕಿನ ರಾತ್ರಿ ಸಂಯುಕ್ತ ಅಮೇರಿಕದ ಎರಿಝೋನ ಪ್ರಾಂತದ ಮೇಲೆ ಸುಮಾರು ೧೪,೦೦೦ ಉಲ್ಕೆಗಳು ಬಿದ್ದವಂತೆ. ಉಲ್ಕಾಪಾತ ನವಂಬರ ತಿಂಗಳಲ್ಲಿ ಹೆಚ್ಚು.

ಗಾಳಿಯು ಗಂಟೆಗೆ ಸುಮಾರು ೫೦೦ ಮೈಲುಗಳ ವೇಗದಲ್ಲಿ ಸಂಚರಿಸುವುದುಂಟು.

ಗೋಪುರ

ಮುಂಬಯಿಯ ರಾಜಾಬಾಯಿ ಗಡಿಯಾರ ಪ್ರಾಸಾದವು ೩೦೦ ಅಡಿ ಎತ್ತರವಾಗಿದೆ.

ಢಿಲ್ಲಿಯ ಸಮೀಪವಿರುವ ಕುತುಬ್ ಮಿನಾರ್ ಎಂಬ ಸ್ತಂಭವು ೨೩೮ ಅಡಿ ಎತ್ತರವಾಗಿದ್ದು, ಜಗತ್ತಿನಲ್ಲೆಲ್ಲ ಅತ್ಯುಚ್ಚವಾದ ಗೋಪುರವೆಂದು

ಪರಿಗಣಿಸಲಾಗಿದೆ. ಇದನ್ನು ೧೩ನೆಯ ಶತಮಾನದಲ್ಲಿ ಕುತುಬುದ್ದೀ ನೆಂಬವನು ತನ್ನ ವಿಜಯಸ್ತಂಭವೆಂದು ಕಟ್ಟಿಸತೊಡಗಿದ್ದರೂ, ಅದ ೧೨೨೦ರಲ್ಲಿ ಅಲ್ತಮಷನೆಂಬವನಿಂದ ಪೂರ್ತೈಸಲ್ಪಟ್ಟಿತೆಂದು ಪ್ರತೀತಿಯಿದೆ.

ಈ ಮಹಾಸ್ತಂಭದ ಮೇಲೆ ಪ್ರಕೃತಿಪ್ರಕೋಪದ ಆಘಾತಗಳು ಅನೇಕ ಬಿದ್ದಿವೆ. ಫಿರೋಜಶಹ ತಗಲಖನ ಆಳಿಕೆಯಲ್ಲಿ ಭೂಕಂಪದಿಂ ಇದರ ತುತ್ತತುದಿಯ ಎರಡು ಅಟ್ಟಳಿಗೆಗಳು ಹಾಳಾದುವು. ಅವುಗಳನ ೧೫೦೫ರಲ್ಲಿ ಸಿಕಂದರ ಲೋಡಿಯು ಸರಿಪಡಿಸಿದನು. ಪುನಃ ೧೭೯೪ರಲ್ಲಿ ಅದಕ್ಕೆ ಧಕ್ಕೆಯಾದಾಗ ಮೇಜರ್ ಸ್ಮಿತ್ ಎಂಬ ಬ್ರಿಟಿಷ್ ಎಂಜಿನಿಯರನ ಅದನ್ನು ಸರಿಪಡಿಸಿದನು.

ಪೀಸಾ ಎಂಬಲ್ಲಿರುವ, ವಾಲಿದ ಗೋಪುರದ ಒಲೆತವು ಪ್ರತಿವರುಷ $\frac{7}{10}$ ಮಿಲಿಮೀಟರಿನಷ್ಟು ಹೆಚ್ಚಾಗುತ್ತಿದೆ. ಇದೇ ಪ್ರಮಾಣದಲ್ಲಿ ವಾಲುತ್ತ ಹೋದರೆ ಇನ್ನು ೩೦೦ ವರ್ಷಗಳಲ್ಲಿ ಅದು ಉರುಳಿಬೀಳುವುದು.

ಎಲೆಕ್ಸಂಡೆರ್ ಗಸ್ಟೇವ್ ಎಫೇಲ್ ಎಂಬ ಇಂಜಿನಿಯರನಿಂದ ಪೆರಿಸಿ ಗೋಪುರವು ನಿರ್ಮಿಸಲ್ಪಟ್ಟಿರುವುದರಿಂದ, ಅವನ ನೆನಪಿಗಾಗಿ ಅದಕ್ಕೆ "ಎಫೇಲ್ ಟವರ್" ಎಂದು ಹೆಸರಿಟ್ಟರು. ರಚಿಸಲು ೨ ವರ್ಷ ಹಿಡಿಯಿತು ೧೮೮೯ ಮಾರ್ಚಿ ೩೧ರಲ್ಲಿ ಅದರ ಪ್ರವೇಶೋತ್ಸವವಾಯಿತು. ರಚನೆಯಲ್ಲಿ ೭,೦೦೦ ಟನ್ ಕಬ್ಬಿಣವನ್ನುಪಯೋಗಿಸಿದರು. ೨೦೦,೦೦೦ ಪವನ ವ್ಯಯವಾಯಿತು. ೯೮೪ ಅಡಿ ಎತ್ತರವಿದೆ.

ಜಗತ್ತಿನಲ್ಲಿ ಅತ್ಯಂತ ಎತ್ತರವಾದ ಕಟ್ಟಡವು ನ್ಯೂಯೋರ್ಕಿನ ಎಂಪಾಯರ್ ಸ್ಟೇಟ್ ಬಿಲ್ಡಿಂಗ್ ಎಂಬುದು. ಅದು ೧,೨೫೨ ಅಡಿ ಎತ್ತರವಾಗಿದ್ದು, ೧೦೨ ಉಪ್ಪರಿಗೆಗಳಿವೆ. ಅದು ೧೯೩೧ನೇ ಮೇ ತಿಂಗಳಲ್ಲಿ ೫,೦೦೦,೦೦೦ ಪವನುಗಳ ಖರ್ಚಿನಲ್ಲಿ ಪೂರ್ಣಗೊಳಿಸಲ್ಪಟ್ಟಿತು.

ಜಗತ್ತಿನ ಅತ್ಯಂತ ಎತ್ತರವಾದ ಕಟ್ಟಡಗಳು

ಹೆಸರು	ಎತ್ತರ (ಅಡಿ)	ಮಾಳಿಗ
ಬಿಜಾಪುರದ ಗೋಲಗುಂಬಜ	೧೯೮	೧
ಚೈನದ ಟಂಗ್ಚೋ ಪಗೋಡ	೨೦೦	೧೩
ದಿಲ್ಲಿಯ ಕುತುಬ್ ಮಿನಾರ	೨೩೮	೫
ಫ್ರಾನ್ಸಿನ ಬ್ರಿಟ್ಟನಿ ದೀಪಸ್ತಂಭ	೨೪೭	೧

ರೋಂ ನಗರದ ಸೈಂಟ್ ಪೀಟರ್ಸ್ ಇಗರ್ಜಿ	೩೩೩	೨೫
ಲಂಡನಿನ ಸೈಂಟ್ ಪೊಲ್ಸ್ ಕೆಥಡ್ರಲ್	೩೬೫	೨೮
ಇಟೆಲಿಯ ಬೆಲ್ ಟವರ್	೩೯೬	೩೧
ಈಜಿಪ್ಟಿನ ದೊಡ್ಡ ಪಿರೆಮಿಡ್	೪೫೧	೩೪
ಫ್ರಾನ್ಸಿನ ಸ್ಟ್ರಾಸ್ಬರ್ಗ ಇಗರ್ಜಿ	೪೫೫	—
ಜರ್ಮನಿಯ ಕೊಲೋನ್ ಇಗರ್ಜಿ	೫೧೨	೪೦
ಅಮೇರಿಕದಲ್ಲಿರುವ ವಾಷಿಂಗ್ಟನ್ನನ ಸ್ಮಾರಕ	೫೫೫	೪೨
ನ್ಯೂಯಾರ್ಕಿನ ವೂಲ್ವರ್ತ್ ಟವರ್	೭೯೨	೫೮
ಪೆರಿಸಿನ ಎಫೇಲ್ ಟವರ್	೯೮೪	೩
ನ್ಯೂಯಾರ್ಕಿನ ಕ್ರಾಯ್ಸ್ಲರ್ ಕಟ್ಟಡ	೧೦೩೦	೧೭೭

ಚಲಚ್ಚಿತ್ರ

ಹಲವು ಸಂಶೋಧನೆಗಳನ್ನು ನಡೆಸಿ ಯಶಸ್ವಿಯಾಗಿ, ೧೯೩೧ನೇ ಅಕ್ಟೋಬರ್ ೧೮ರಲ್ಲಿ ಮರಣಹೊಂದಿದ ಅಮೇರಿಕದ ಪ್ರಸಿದ್ಧ ವೈಜ್ಞಾನಿಕನಾದ ಆಲ್ಫ್ರೆಡ್ ಥಾಮಸ್ ಎಡಿಸನನು ಚಲಚ್ಚಿತ್ರಗಳ ಜನಕನು.

೧೮೯೬ನೇ ಎಪ್ರಿಲ್ ೨೩ರಲ್ಲಿ ಅಮೆರಿಕದ ನ್ಯೂಯೊರ್ಕ್ ನಗರದ "ಬ್ರಾಡ್ವೇ ಸಂಗೀತ ಕಲಾಮಂದಿರ"ದಲ್ಲಿ ಜಗತ್ತಿನ ಮೊತ್ತಮೊದಲನೆಯ ಚಲಚ್ಚಿತ್ರವು ಪ್ರದರ್ಶಿಸಲ್ಪಟ್ಟಿತು.

ಬ್ರಿಟ್ಟೈನಿನಲ್ಲಿ ಮೊದಲನೆ ಚಲಚ್ಚಿತ್ರವು ೧೯೦೩ರಲ್ಲಿಯೂ ಭಾರತದಲ್ಲಿ ೧೯೦೮ರಲ್ಲಿಯೂ ಪ್ರದರ್ಶಿಸಲ್ಪಟ್ಟಿತು.

೧೯೪೪ರಲ್ಲಿ ಗತಿಸಿದ ದಾದಾ ಸಾಹೇಬ ಫಾಲ್ಕೆ ಎಂಬವನು ಭಾರತದಲ್ಲಿ ಮೊದಲನೆಯದಾಗಿ ಚಲಚ್ಚಿತ್ರ ಕೈಗಾರಿಕೆಗೆ ಕೈಹಚ್ಚಿದನು.

ಭಾರತದ ಮೊತ್ತಮೊದಲಿನ ಚಿತ್ರವು 'ರಾಜಾ ಹರಿಶ್ಚಂದ್ರ' ಎಂಬುದು.

೧೯೨೬ನೇ ಆಗೋಸ್ತು ೨೩ರಲ್ಲಿ ವಾರ್ನರ್ ಬ್ರದರ್ಸರವರ 'ಡೊನ್ ಜುವಾನ್' ಎಂಬ ಜಗತ್ತಿನ ಮೊದಲನೆಯ ವಾಕ್ಚಿತ್ರವನ್ನು ನ್ಯೂಯೋರ್ಕಿನಲ್ಲಿ ಪ್ರದರ್ಶಿಸಿದರು

ಭಾರತದ ಮೊದಲನೆಯ ವಾಕ್ಚಿತ್ರವು 'ಆಲಂ ಆರಾ' ಎಂಬುದು. ಇದು ೧೯೩೧ರಲ್ಲಿ ತೆರೆಯ ಮೇಲೆ ಬಂತು.

ಮಸೂರ (ಭೂತಕನ್ನಡಿ)ಗಳ ಉಪಯೋಗವನ್ನು ಮೈಕಲ್ ಫೆರಾಡೆ
ಎಂಬವನು ಕಂಡುಹಿಡಿದನು. ಪೀಸ ಎಂಬ ನಗರದ ವಿಶ್ವವಿದ್ಯಾಲಯದಲ್ಲಿ
ಗಣಿತ ಶಾಸ್ತ್ರದ ಬೋಧಕನಾಗಿದ್ದ ಗೆಲಿಲಿಯೋ ಎಂಬವನು ದೂರದರ್ಶಕ
ವನ್ನು ರಚಿಸಿದನು. (ಅಕ್ಬರನ ಕಾಲದಲ್ಲಿ.)

೧೬೭೫ರಲ್ಲಿ ಲುವೆನ್‌ಹಾಕ್ ಎಂಬವನಿಂದ ಮೊದಲನೆಯದಾಗಿ
ಸೂಕ್ಷ್ಮದರ್ಶಕದ ಆವಿಷ್ಕಾರವಾಯಿತು.

ದೊಡ್ಡದು

ಜಗತ್ತಿನ ಅತಿ ದೊಡ್ಡ ಪಾಕಶಾಲೆಯು ಪುರಿಯ ಜಗನ್ನಾಥ ದೇವಾ
ಲಯದಲ್ಲಿದೆ. ಅಲ್ಲಿ ಸಾಮಾನ್ಯವಾಗಿ ಪ್ರತೀ ದಿನ ೧೦,೦೦೦ ಮಂದಿಗೆ
ಬೇಕಾಗುವಷ್ಟು ಆಹಾರ ಬೇಯಿಸಲ್ಪಡುವುದು. ಜಾತ್ರೆಗಳ ಸಮಯದಲ್ಲಿ
ಈ ಸಂಖ್ಯೆಯು ೫೦,೦೦೦ಕ್ಕೂ ಮೀರುತ್ತದೆ.

ಅತಿ ದೊಡ್ಡ ಗಡಿಯಾರವು ಮೊಂಟ್ರೇಲ್ ಎಂಬಲ್ಲಿದೆ. ಅದನ್ನು
೬೦ ಅಡಿ ಎತ್ತರದ ಉಕ್ಕಿನ ಕಂಬದ ಮೇಲೆ ಅತಿ ಎತ್ತರವಾದ ಕಟ್ಟಡದಲ್ಲಿ
ಇಟ್ಟಿರುವರು. ಇದರ ಭಾರ ೬ ಟನ್. ಗಂಟೆ ಮತ್ತು ಮಿನಿಟುಗಳ
ಮುಳ್ಳುಗಳು ಕ್ರಮವಾಗಿ ೨೦ ಮತ್ತು ೩೦ ಅಡಿ ಉದ್ದವಾಗಿವೆ. ಇದನ್ನು
ಕೆನಡದಲ್ಲಿ ತಯಾರಿಸಿದರು.

ಕೆಲಿಫೋರ್ನಿಯದಲ್ಲಿ ಒಂದು ಸೀಮೆ ಎಣ್ಣೆಯ ಬಾವಿಯು ೧೫,೦೦೪
ಅಡಿ ಆಳವಿದೆ. ಇಷ್ಟು ಆಳಕ್ಕೆ ಅಗೆದ ಬಾವಿ ಜಗತ್ತಿನಲ್ಲಿ ಬೇರೆ ಇಲ್ಲ.

ಸಿಂಪ್ಲನ್ ಟನ್ನೆಲ್ ಎಂಬುದು ಜಗತ್ತಿನಲ್ಲೇ ಅತ್ಯಂತ ದೊಡ್ಡ ಸುರಂಗ
ರಸ್ತೆ. ಇದು ಸಮುದ್ರ ಮಟ್ಟದಿಂದ ೨೩೧೨ ಅಡಿ ಎತ್ತರದಲ್ಲಿದ್ದು ೧೨೧
ಮೈಲು ಉದ್ದವಾಗಿದೆ. ಇದರ ಕೆಲಸ ಮುಗಿಸಲು ೬ ವರ್ಷ ಹಿಡಿಯಿತು.

ಅಮೇರಿಕದ ವಾಷಿಂಗ್ಟನ್ನಿನಲ್ಲಿರುವ, ಸರಕಾರದವರು ಸ್ಥಾಪಿಸಿರುವ
ಮುದ್ರಣಾಲಯವು ಜಗತ್ತಿನಲ್ಲಿ ದೊಡ್ಡದು. ೨೨ ಎಕ್ರೆಯಷ್ಟು ಸ್ಥಳವನ್ನು
ಆಕ್ರಮಿಸಿಕೊಂಡಿದೆ. ೬೦೦೦ ಮಂದಿ ಕೆಲಸಗಾರರಿರುವರು.

ನ್ಯೂಯೋರ್ಕಿನ ರಾಕ್‌ಫೆಲರ್ ಕೇಂದ್ರದಲ್ಲಿರುವ 'ರೇಡಿಯೋ ಸಿಟಿ
ಮ್ಯೂಸಿಕ್ ಹೋಲ್' ಎಂಬುದು ಜಗತ್ತಿನ ದೊಡ್ಡ ನಾಟಕ ಶಾಲೆ. ಇಲ್ಲಿ
೬೦೦೦ ಪ್ರೇಕ್ಷಕರಿಗೆ ಕೂಡುವಷ್ಟು ಸ್ಥಳವಿದೆ.

ಜಗತ್ತಿನಲ್ಲಿ ಅತ್ಯಂತ ಆಳವಾದ ಸಾಗರವು ಪೆಸಿಫಿಕ್(ಶಾಂತಸಾಗರ). ಫಿಲಿಪ್ಪೈನ್ ಮತ್ತು ಜಪಾನುಗಳ ನಡುವೆ, ಈ ಸಾಗರವು ಒಂದು ಕಡೆ ಸುಮಾರು ೩೪,೦೦೦ ಅಡಿ ಆಳವಿದೆ.

ಜಗತ್ತಿನಲ್ಲಿ ಅತ್ಯಂತ ದೊಡ್ಡ ಸಭಾಭವನವು ದಕ್ಷಿಣ ಭಾರತದ ರಾಮೇಶ್ವರ ದೇವಾಲಯುದಲ್ಲಿದೆ; ೩,೧೪೫ ಅಡಿ.

ಭೂಲೋಕದಲ್ಲಿರುವ ಸಿನೆಮಾ ಮಂದಿರಗಳಲ್ಲಿ ಅತ್ಯಂತ ದೊಡ್ಡದು ಮೋಸ್ಕೋ ನಗರದಲ್ಲಿದೆ. ೧೫,೦೦೦ ಜನರು ಕುಳಿತುಕೊಳ್ಳಬಹುದು.

ಸಿಸಿಲಿ ದ್ವೀಪದ ಎಟ್ನಾ ಎಂಬ ಜ್ವಾಲಾಮುಖಿಯ ಸಮೀಪವಿರುವ "ಚೆಸ್ಟ್ನೆಟ್" ಮರವು ಅತ್ಯಂತ ದೊಡ್ಡದು. ಅದರ ಸುತ್ತಳತೆ ೧೯೦ ಅಡಿ.

ಜಗತ್ತಿನಲ್ಲಿ ದೊಡ್ಡ ಶಿಖರ—ಎವರೆಸ್ಟ್—೨೯,೨೦೦ ಅಡಿ.

ಕಾಲುವೆ—ಸ್ಟಾಲಿನ್ಸ್—ಬಾಲ್ಟಿಕ್ ವೈಟ್ ಸೀ ಕೆನಾಲ್ (ರಷ್ಯಾ) (೧೪೧ ಮೈಲು)

ರೈಲ್ವೆಮಾರ್ಗ—ಟ್ರಾನ್ಸ್ ಸೈಬಿರಿಯನ್ ರೈಲು ರಸ್ತೆ (ರಷ್ಯಾ) (೭,೭೦೦ ಮೈಲು)

ರಾಜ್ಯ—ಚೈನಾ—(ಜನಸಂಖ್ಯೆ ೫೦ ಕೋಟಿ)

ಪಟ್ಟಣ—ಲಂಡನ್—(ಜನಸಂಖ್ಯೆ ಒಂದು ಕೋಟಿ)

ಗೋಡೆ—ಚೈನಾ—(೨೦೦೦ ಮೈಲು)

ಹೂ—ರೆಫಿಸಿಯಾ—(ಮಧ್ಯಳತೆ ೩ ಅಡಿ)

ನದಿ—ಮಿಸಿಸಿಪಿ ಮಿಸೂರಿ—(೪,೨೨೧ ಮೈಲು ಉದ್ದ)

ರೇವು—ಹೆಲಿಫಾಕ್ಸ್—(ಕೆನಡ)

ಪ್ಲಾಟ್‌ಫೋರ್ಮು—ಸೋನಾಪುರ (ಭಾರತ)—(೨,೪೧೫ ಅಡಿ)

ರೈಲ್ವೆ ಸಿಲ್ದಾಣ—ಗ್ರಾಂಡ್ ಸೆಂಟ್ರಲ್ ಟರ್ಮಿನಲ್ (ಅಮೇರಿಕ) ೪೭ ಪ್ಲಾಟ್‌ಫೋರ್ಮು.

ಟಂಟೊರೆ ಎಂಬ ಚಿತ್ರಕಾರನ "ಸ್ವರ್ಗ" ಎಂಬ ಬೃಹದಾಕಾರದ ಚಿತ್ರವು ವೆನಿಸ್ ನಗರದ ಡೋಜೆ ಅರಮನೆಯಲ್ಲಿದೆ. ಜಗತ್ತಿನಲ್ಲಿ ಇಷ್ಟು ದೊಡ್ಡ ತೈಲಚಿತ್ರವು ಇನ್ನೊಂದಿಲ್ಲ, ೮೨ ಅಡಿ ಉದ್ದ, ೩೩ ಅಡಿ ಎತ್ತರ.

ನಾಣ್ಯ

ಹಿಂದುಸ್ಥಾನವನ್ನು ೧೫೩೯ರಿಂದ ೧೫೪೫ರ ವರೆಗೆ ಆಳಿದ ಷರ್ ಷಾ ಎಂಬವನು ಮೊದಲನೆಯದಾಗಿ ರೂಪಾಯಿ ನಾಣ್ಯಗಳನ್ನು ಚಲಾವಣೆಯಲ್ಲಿ ತಂದನು. ಆಗ ಅದರ ತೂಕವು ೧೮೦ ಗ್ರೈನ್ಸ್ ಇತ್ತು.

೧೮೩೫ರಲ್ಲಿ ಬ್ರಿಟಿಷರು ಈಗಿರುವ ನಮೂನೆಯ ರೂಪಾಯಿಗಳನ್ನು ಚಲಾವಣೆಗೆ ತಂದರು.

೨-೬-೧೯೪೭ರಿಂದ ಶುದ್ಧ ಬೆಳ್ಳಿಯ ರೂಪಾಯಿಯ ಬದಲಿಗೆ ನಿಕ್ಕ ಲಿನ ಮಿಶ್ರಣದ ರೂಪಾಯಿಯು ಚಲಾವಣೆಯಲ್ಲಿ ಬಂತು.

ಬೇರೆ ಬೇರೆ ದೇಶಗಳೂ ನಾಣ್ಯಗಳೂ.

ಆಸ್ಟ್ರಿಯಾ—ಕ್ರೋನ್.
ಬ್ರೆಜಿಲ್—ಮಿಲ್‌ರೀಸ್.
ಈಜಿಪ್ಟ್—ಪವನು.
ಫ್ರಾನ್ಸ್—ಫ್ರೇಂಕ್.
ಹೊಲ್ಲೆಂಡು—ಫ್ಲೋರಿನ್.
ಇಂಡಿಯಾ—ರೂಪಾಯಿ.
ಜಪಾನ್—ಯೆನ್.
ಮೆಕ್ಸಿಕೊ—ಪೆಸೋ.
ಪೋಲೆಂಡ್—ಝ್ಲೋಟಿ.
ರಷ್ಯಾ—ರೂಬೆಲ್ಸ್
ಸ.ಅಮೇರಿಕ—ಡಾಲರ್.
ಚೈನಾ—ಟೆಯಲ್.
ಜರ್ಮನಿ—ಮಾರ್ಕ್.
ಬ್ರಿಟನ್—ಪೌಂಡು.
ಪರ್ಶಿಯಾ—ಬ್ರೆಸ್.
ಸಯಾಂ—ಟಿಕೆಲ್.
ಬೆಲ್ಜಿಯಂ—ಬೆಲ್ಗಾ.

ನೀರು

ಬಿಕಾನೀರದಲ್ಲಿ ಹಲವು ಕಡೆ ಬಾವಿಗಳು ಸುಮಾರು ೩೦೦ ಅಡಿಗ ಳಷ್ಟು ಆಳವಿವೆ. ಹಿಂದುಸ್ಥಾನದಲ್ಲಿ ಒಟ್ಟು ೧ ಕೋಟಿ ೩೫ ಲಕ್ಷ ಬಾವಿಗಳಿವೆ. ನೀರು ಗಾಳಿಗಿಂತ ೮೦೦ ಪಾಲಷ್ಟು ಭಾರವಿದೆ ಜಲಜನಕವು ಗಾಳಿಗಿಂತ ೧೪ ಪಾಲು ಹಗುರವಾಗಿದೆ. ಸಮುದ್ರದ ನೀರಿನಲ್ಲಿ ನೂರಕ್ಕೆ ೩॥ ಪಾಲು ಉಪ್ಪು ಇದೆ. ಮೆಗ್ನೇಸಿಯಂ, ಕೆಲ್ಸಿಯಂ, ಸೋಡಿಯಂ ಮೊದಲಾದ ಲವಣಗಳೂ ಇವೆ.

ಜಗತ್ತಿನಲ್ಲಿರುವ ಅತ್ಯಂತ ತಗ್ಗಿನಲ್ಲಿರುವ ಸರೋವರವು ಮೃತಸರೋವರ (Dead Sea) ಅದು ಸಮುದ್ರ ಪಾತಳಿಗಿಂತ ೧೩೦೦ ಅಡಿ ಕೆಳಗಿದೆ. ೪೭ ಮೈಲು ಉದ್ದ; ೩೪೦ ಚದರ ಮೈಲು ವಿಸ್ತೀರ್ಣ. ಈ ಸರೋವರದ ನೀರು ಜಗತ್ತಿನ ಇತರ ಸಮುದ್ರಗಳ ನೀರಿಗಿಂತ ಹೆಚ್ಚು ಉಪ್ಪು. ಇದರಲ್ಲಿ ಮೀನುಗಳು ಜೀವಿಸಲಾರವು; ನರದೇಹವು ಸುಲಭವಾಗಿ ತೇಲಬಲ್ಲುದು.

ಸಮುದ್ರದಲ್ಲಿ ಸುಮಾರು ೭೦೦ ಅಡಿಗಳ ಕೆಳಗೆ ಪ್ರಕಾಶವು ಇಳಿಯುವುದಿಲ್ಲ. ಸಮುದ್ರದ ನೀರನ್ನೆಲ್ಲ ಆವಿ ಮಾಡಿದರೆ ದೊರೆಯುಬಹುದಾದ ಉಪ್ಪಿನಿಂದ ಭೂಲೋಕವನ್ನೆಲ್ಲ ೧೧೩ ಅಡಿ ದಪ್ಪವಾಗಿ ಉಪ್ಪಿನಿಂದ ಮುಚ್ಚಬಹುದಂತೆ. ಪರ್ಶಿಯನ್ ಕೊಲ್ಲಿಯ ನೀರು ಬೇಸಗೆಯಲ್ಲಿ F 96 ಡಿಗ್ರಿಗಳಷ್ಟು ಬಿಸಿಯಾಗುತ್ತದೆ. ಭೂಮಿಯ ಮೇಲೆ ಸುಮಾರು ೧೪೦,೦೦೦,೦೦೦ ಚ. ಮೈಲು ಸಮುದ್ರವಿದೆ.

ಅಮೇರಿಕದ ಎಮೆಝೋನ್ ನದಿಯು ಅತಿ ಅಗಲವಾದುದು. ಕೆಲವು ಕಡೆ ೫೦ ಮೈಲು ಅಗಲವಿದೆ.

೧೮೫೯ರಲ್ಲಿ ಸುಯೇಜಕಾಲುವೆಯು ಫರ್ಡಿನಾಂಡ್ ಡಿ ಲೆಸೆಪ್ಸ್ ಎಂಬ ಫ್ರೆಂಚ್ ಇಂಜಿನಿಯರನಿಂದ ಯೋಜಿಸಲ್ಪಟ್ಟು, ಕೆಲಸವಾರಂಭವಾಗಿ, ೧೮೬೯ನೇ ನವಂಬರ ೧೭ರಲ್ಲಿ ತೆರೆಯಲ್ಪಟ್ಟಿತು. ಆ ಕಾಲದಲ್ಲಿ ಆ ಕಾಲುವೆಯನ್ನು ಪೂರ್ಣಗೊಳಿಸಲು ೧೭,೦೦೦,೦೦೦ ಪವನು ವ್ಯಯವಾಯಿತು.

ಭಾರತದಲ್ಲಿ ನೀರಾವರಿಯಿಂದ ೫ ಕೋಟಿ ಎಕರೆ ಭೂಮಿಯನ್ನು ಬೇಸಾಯ ಮಾಡಲಾಗುತ್ತದೆ.

ಜಗತ್ತಿನಲ್ಲಿ ಹೆಚ್ಚು ಮಳೆ ಬೀಳುವ ಸ್ಥಳವು ಭಾರತದ ಚಿರಾಪುಂಜಿ (ಅಸ್ಸಾಂ) ಎಂಬುದು. ಅಲ್ಲಿ ವರ್ಷದ ಸರಾಸರಿ ಮಳೆಯು ೪೫೮ ಇಂಚು. ೧೮೬೧ರಲ್ಲಿ ೯೦೦ ಇಂಚುಗಳಷ್ಟು ಅತೀ ಹೆಚ್ಚಿನ ಮಳೆಯು ಅಲ್ಲಿ ಬಿದ್ದಿದೆ.

ಕರ್ನಾಟಕದಲ್ಲಿ ಅತೀ ಹೆಚ್ಚಿನ ಮಳೆಯು ಆಗುಂಬೆ ಎಂಬಲ್ಲಿ ಬೀಳುತ್ತದೆ. ಆಗುಂಬೆಯ ವಾರ್ಷಿಕ ಸರಾಸರಿ ಮಳೆಯು ೩೨೭ ಇಂಚು ೧೮೯೭ರಲ್ಲಿ ಆಗುಂಬೆಯಲ್ಲಿ ೪೮೩ ಇಂಚು ಮಳೆ ಬಿದ್ದಿತ್ತು.

ಒಂದು ಘನ ಅಡಿ ನೀರಿನ ಭಾರ ೬೨॥ ರಾತಲು.

ಪ್ರಕಾಶ

ಬೆಳಕಿನ ಕಿರಣಗಳನ್ನು ಅಂಗ್‌ಸ್ಟ್ರಮ್ A ಎಂಬ ಅಳತೆಯಿಂದ ಅಳೆಯುತ್ತಾರೆ. ಒಂದು ಮಿಲಿಮೀಟರ್ ಅಳತೆಗೆ ೧೦,೦೦೦,೦೦೦ ಅಂಗ್‌ಸ್ಟ್ರಮ್‌ಗಳಾಗುವುವು. ಅತಿ ದೊಡ್ಡ ಕೆಂಪು ಬಣ್ಣದ ಅಲೆಯು ೮೦೦೦ A (ಅಂಗ್‌ಸ್ಟ್ರಮ್) ಅತಿ ಚಿಕ್ಕ ಅಲೆಯು ನೇರಳೆ ಬಣ್ಣದ್ದು. ಅದು ೪೦೦೦ A. ಇದಕ್ಕಿಂತ ಕಿರಿದಾದ ಬೆಳಕಿನ ಅಲೆಗಳು ನಮ್ಮ ಕಣ್ಣಿಗೆ ಕಾಣಿಸಲಾರವು. ಕ್ಷ-ಕಿರಣಗಳು ೧೦ A ಉದ್ದವಾಗಿವೆ. ಗಾಮಾ ಕಿರಣಗಳು ·೦೦೪.

ತಾಸಿಗೆ ೧೨೦ ಗ್ರೈನ್ ತೂಕ ಮಯಣವನ್ನು ಉರಿಸುವ ಮೇಣದ ಬತ್ತಿಯ ಪ್ರಕಾಶವನ್ನು ಒಂದು 'ಕೇಂಡ್ಲ್ ಪವರ್' ಎನ್ನುವರು

ಬೆಳಕು ತನ್ನ ವೇಗದಿಂದ ಒಂದು ಕ್ಷಣಕ್ಕೆ ಭೂಮಿಗೆ ೭॥ ಸುತ್ತು ಬರಬಹುದು. ಅದು ಕ್ಷಣಕ್ಕೆ ೧೮೬,೦೦೦ ಮೈಲಿನ ವೇಗದಲ್ಲಿ ನಿರ್ವಿಘ್ನವಾಗಿ ಒಂದು ವರ್ಷಕ್ಕೆ ಎಷ್ಟು ದೂರ ಹೋಗಬಹುದೋ ಅಷ್ಟು ದೂರಕ್ಕೆ ಒಂದು ಜ್ಯೋತಿ ವರ್ಷವೆಂದು ಹೆಸರು.

ಪಟ್ಟಣ

ಲಂಡನ್ ೨೯ ನಗರಗಳ ಗುಂಪು. ಅದರ ಜನಸಂಖ್ಯೆ ಒಂದು ಕೋಟಿ. ಲಂಡನಿನ ನೆಲದಡಿಯ ಸುರಂಗ ರೈಲ್ವೆಯು ಸುಮಾರು ೬೦ ಮೈಲು ಉದ್ದಕ್ಕಿದೆ. ಅಲ್ಲಿ ಒಟ್ಟು ೨೭೭ ಸುರಂಗ ರೈಲ್ವೆಯ ನಿಲ್ದಾಣಗಳಿವೆ.

ಅಲೆಗ್ಸಾಂಡ್ರಿಯವು ಗ್ರೀಕರ ವಿದ್ಯಾ ಸಂಸ್ಕೃತಿಗಳಿಗೆ ಮೂಲ ಸ್ಥಾನವಾಗಿದೆ. ರೇಖಾಗಣಿತವನ್ನು ಸ್ಥಾಪಿಸಿದ ಯೂಕ್ಲಿಡ್ (Euclid) ಎಂಬವನೂ, ಪೃಥ್ವಿಗೋಲದ ಸುತ್ತಳತೆಯನ್ನು ಗಣಿಸಿದ ಎರಟೋಸ್ತೀನಿಸ್ (Eratosthenes) ಎಂಬ ಭೂವಿವರಣಕಾರನೂ, ಹಬೆಯ ಯಂತ್ರವನ್ನು ಮೊಟ್ಟಮೊದಲು ಕಂಡುಕೊಂಡ ಹೆರನ್ (Heron) ಎಂಬವನೂ, ಯಂತ್ರಯೋಜನೆಯಲ್ಲಿ ಯಶಸ್ವಿಯಾದ ಆರ್ಕಿಮಿಡೀಸ್ (Archimedes) ಎಂಬವನೂ, ಮಾನವ ದೇಹರಚನೆಯಲ್ಲಿ ಅನೇಕಾಂಶವನ್ನು ಗುರುತು ಹಿಡಿದ ಶಸ್ತ್ರ ಚಿಕಿತ್ಸಾ ನಿಪುಣ ಹೆರೊಫೈಲಸ್ (Herophilus) ಎಂಬವನೂ ಅಲ್ಲಿದ್ದು ಜ್ಞಾನಾರ್ಜನೆಯನ್ನು ಮಾಡಿದವರು.

ಆಗ್ರದ ಸಮೀಪವಿರುವ ಫತ್ತೆಪುರ ಸಿಕ್ರಿಯು ೧೫೭೦ರಿಂದ ೧೫೮೫ರ ವರೆಗೆ ಮೊಗಲ್ ಚಕ್ರಾಧಿಪತ್ಯದ ರಾಜಧಾನಿಯಾಗಿತ್ತು.

ಭಾರತದಲ್ಲಿ ಮೊಟ್ಟಮೊದಲು ರೇಖಾಗಣಿತದ ಪ್ರಕಾರ ಕಟ್ಟಿದ ಪಟ್ಟಣವು ಜಯಪುರ. ಅದರ ಮುಖ್ಯ ರಸ್ತೆಗಳು ೧೧೧ ಅಡಿ ಅಗಲವಾಗಿದ್ದು ಒಂದಕ್ಕೊಂದು ಸಮಾನಾಂತರವಾಗಿವೆ.

ಮುಂಬಯಿ ಬಂದರದ ವಿಸ್ತೀರ್ಣ ಸುಮಾರು ೭೪ ಚ. ಮೈಲು.

ಪ್ರಾಣಿ

ಆಯ್‌ಸ್ಟರ್ ಎಂಬ ಜಲಜಂತುವು ತನ್ನ ಬೆಳವಣಿಗೆಯ ಒಂದು ಅವಸ್ಥೆಯಲ್ಲಿ ಗಂಡುತನದಿಂದ ಹೆಣ್ಣುತನಕ್ಕೆ ಬದಲಾಯಿಸುವುದು.

ಕಪ್ಪೆಯು ಒಂದು ನಿಮಿಷದಲ್ಲಿ ಸುಮಾರು ನಾಲ್ಕು ಸಾವಿರ ಜಂತುಗಳನ್ನು ತಿನ್ನುವುದೆಂದು ಕಂಡುಬಂದಿದೆ. ನಮ್ಮ ದೃಷ್ಟಿಗೆ, ಕಪ್ಪೆಗಳು ಸುಮ್ಮನೆ ಕುಳಿತಂತೆ ಕಂಡರೂ ಅವು ಆಹಾರವನ್ನು ಕಬಳಿಸುತ್ತಲೇ ಇವೆ.

ಪೇರಿಸಿನ ಪ್ರಾಣಿಶಾಲೆಯಲ್ಲಿ ೫ ರಾತಲು ಭಾರದ ೨॥ ಅಡಿ ಎತ್ತರದ ಕಪ್ಪೆಯೊಂದಿತ್ತು. ಅದನ್ನು ಆಫ್ರಿಕದಿಂದ ತಂದಿದ್ದರು.

ರೇಶ್ಮೆಹುಳವು ತನ್ನ ಕೆಲವೇ ದಿನದ ಬಾಳ್ವೆಯಲ್ಲಿ ತನ್ನ ದೇಹ ತೂಕಕ್ಕಿಂತ ೪,೭೦೦ ಪಾಲು ಹೆಚ್ಚು ಆಹಾರವನ್ನು ತಿನ್ನುವುದು.

ಸಾಧಾರಣ ಮಿಡಿತೆಗಳ ಉದ್ದ ಒಂದೆರಡಂಗುಲಗಳಷ್ಟು. ಆದರೆ, ವೆಸ್ಟ್ ಇಂಡೀಸಿನ 'ವಾಕಿಂಗ್ ಸ್ಟಿಕ್' ಎಂಬ ಒಂದು ಜಾತಿಯ ಮಿಡಿತೆಯು ೧೨ ಇಂಚು ಉದ್ದವಾಗಿ ಬೆಳೆಯುತ್ತದೆ. ಮಿಡಿತೆಗೆ ಎರಡೂವರೆ ಅಂಗುಲಕ್ಕಿಂತಲೂ ಹೆಚ್ಚು ದೂರ ಕಣ್ಣು ಕಾಣಿಸುವುದಿಲ್ಲ.

ಶಬ್ದಮಾಡದಿರುವ ಪ್ರಾಣಿಗಳಲ್ಲಿ ಜಿರಾಫೆಯು ಒಂದಾಗಿದೆ.

ಕುದುರೆಯು ತನ್ನ ಭಾರಕ್ಕಿಂತ ೫ ಪಾಲಷ್ಟು ಭಾರವನ್ನು ಹೊರಬಲ್ಲದು. ಆದರೆ, ತುಂಬಿಯು ೩೦ ಪಾಲು, ಸೊಳ್ಳೆಯು ೧೫೦ ಪಾಲಷ್ಟು ಹೆಚ್ಚು ಭಾರವನ್ನು ಹೊರಬಲ್ಲವು.

ಭಾರತ

ಭಾರತದ ಭೂಗಡಿಯು ೭,೧೦೦ ಮೈಲು ಉದ್ದವಾಗಿಯೂ ಸಮುದ್ರದಂಡೆಯು ೪,೧೦೦ ಮೈಲು ಉದ್ದವಾಗಿಯೂ ಇದೆ. ಸಮುದ್ರಕರಾವಳಿಯಲ್ಲಿ ಹಡಗು ಚಲಾವಣೆಗೆ ಸಹಾಯವಾಗಲು ಕರಾವಳಿಯಲ್ಲಿ ಒಟ್ಟು ೨೮೦

ದೀಪಸ್ತಂಭಗಳೂ, ೭ ಲಘುಹಡಗುಗಳೂ, ೧೧೦ ಲಘುಬೋಯ್ (ತೇಲಾಡುವ ಚಿಹ್ನೆ)ಗಳೂ, ೨೦೧ ಬೋಯ್‌ಗಳೂ, ೪೦೩ ಚಿಕ್ಕ ದೀಪಗಳೂ, ೭೧೩ ಇತರ ಚಿಕ್ಕ ನಿಶಾನೆಗಳೂ ಇವೆ.

ಭಾರತದಲ್ಲಿ ಒಟ್ಟು ೨೨ ಬಂದರುಗಳಿವೆ. ಬೇಡಿ, ಓಖಾ, ಸೂರತ್, ಮುಂಬಾಯಿ, ಮರ್ಮಗೋವ, ಮಂಗಳೂರು, ಖಾಂಡ್ಲಾ, ಕಲ್ಲಿಕೋಟೆ, ಕೊಚ್ಚಿ, ಆಲೆಪ್ಪಿ, ಕ್ವಿಲನ್, ತುತ್ತುಕೋಡಿ, ಧನುಷ್ಕೋಡಿ, ನಾಗಪಟ್ಟಣ, ಕರೈಕಾಲ್, ಕಡಲೂರು, ಪಾಂಡಿಚೇರಿ, ಮದರಾಸು, ಮಛಲೀಪಟ್ಟಣ, ಕಾಕಿನಾಡು, ವಿಶಾಖಪಟ್ಟಣ ಮತ್ತು ಕಲ್ಕತ್ತ.

ಭಾರತದಲ್ಲಿ ಒಟ್ಟು ೨೯೯,೭೨೦ ಮೈಲು ಮೋಟಾರಿನ ರಸ್ತೆಯಿದೆ. ಅಂದರೆ ಚ. ಮೈಲಿಗೆ ೦·೨೨ ಮೈಲು ರಸ್ತೆಯಿದೆ. ಒಟ್ಟು ೪೭,೪೫೦ ಮೈಲು ರಸ್ತೆ ಇದೆ. ೧೯೧೨ರಲ್ಲಿ ರಾಜಧಾನಿಯನ್ನು ಕಲ್ಕತ್ತದಿಂದ ಢಿಲ್ಲಿಗೆ ವರ್ಗಾಯಿಸಿದರು. ಹೊಸ ಢಿಲ್ಲಿಯ ರಚನೆಗಾಗಿ ೨೫ ಕೋಟಿ ರೂಪಾಯಿಗಳ ವೆಚ್ಚವಾಗಿದೆ. ಪಂಡಿತ ಮದನಮೋಹನ ಮಾಲವೀಯರು ಸ್ಥಾಪಿಸಿದ ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ೧೬ ರಾಷ್ಟ್ರಗಳ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿದ್ದಾರೆ. ಜಗತ್ತಿನಲ್ಲಿರುವ ೫೪ ಕೋಟಿ ದನಗಳಲ್ಲಿ ಮೂರನೆಯ ಒಂದು ಭಾಗ ಅಂದರೆ ೧೮ ಕೋಟಿ ದನಗಳು ಭಾರತದಲ್ಲಿವೆ. ೧೯೫೧ನೇ ಇಸವಿಯ ಖಾನೆಸುಮಾರಿಯಂತೆ ಭಾರತದ ಜನಸಂಖ್ಯೆಯು ೩೬ ಕೋಟಿ (೩೫೬,೮೨೯,೪೮೫).

೧೮೫೩ನೇ ಎಪ್ರೀಲಿನಲ್ಲಿ ಭಾರತದ ಮೊದಲನೆಯ ರೈಲುರಸ್ತೆಯು ಮುಂಬಾಯಿಯಿಂದ ಕಲ್ಯಾಣದ ವರೆಗೆ ೨೨ ಮೈಲುಗಳಿಗೆ ಹಾಕಲ್ಪಟ್ಟಿತು. ಭಾರತದ ಮೊದಲನೆಯ ರೈಲ್ವೆ ಇಂಜಿನು ಇಂಗ್ಲಾಂಡಿನ ಲಂಕೇಶಯರಿನ ವಲ್ಕನ್ ಫೌಂಡ್ರಿಯಲ್ಲಿ ೧೮೫೨ರಲ್ಲಿ ತಯಾರಾಯಿತು.

ಭಾರತದಲ್ಲಿ ೧೨ ಮುಖ್ಯ ಭಾಷೆಗಳಿವೆ. ೬೦ ಸಿನೇಮಾ ಸ್ಟುಡಿಯೋಗಳಿವೆ. ಚಲಚ್ಚಿತ್ರಗಳಲ್ಲಿ ೭೦,೦೦೦ ಮಂದಿ ಕೆಲಸಮಾಡುತ್ತಿದ್ದಾರೆ. ೪೦೮ ಸೆಣಬಿನ ಗಿರಣಿಗಳಿವೆ. ೧೧೨ ಸೆಣಬಿನ ಕಾರ್ಖಾನೆಗಳಿವೆ. (ಪಶ್ಚಿಮ ಬಂಗಾಲ ಒಂದರಲ್ಲಿಯೇ ೧೦೧ ಸೆಣಬಿನ ಕಾರ್ಖಾನೆಗಳವೆ.) ಭಾರತದಲ್ಲಿ ಒಟ್ಟು ೫೦ ಲಕ್ಷ ಬೇಲು ಗೋಣಿನಾರು ಬೆಳೆಯುತ್ತದೆ. ಒಟ್ಟು ೧೧೬ ಗಾಜಿನ ಕಾರ್ಖಾನೆಗಳಿವೆ.

ಭಾರತದಲ್ಲಿ ೧೮೪೮ರಲ್ಲಿ ಟೀಯನ್ನು ಬೆಳೆಯಿಸಲು ಪ್ರಾರಂಭಿಸಿದರು. ಟೀ ಬೆಳೆಯುವುದರಲ್ಲಿ ಈಗ ಪ್ರಪಂಚದಲ್ಲೆಲ್ಲ ಭಾರತವು ಮೊದಲನೆಯದು.

೧೯೫೬ರಲ್ಲಿ ಭಾರತವು ಭಾಷಾನುವಾರಾಗಿ ಹದಿನಾಲ್ಕು ರಾಜ್ಯಗಳಾಗಿ ಪುನರ್ರಚಿಸಲ್ಪಟ್ಟಿತು. ೧೯೫೬ನೇ ನವಂಬರ ತಾ. ೧ರಿಂದ ಈ ಕೆಳಗಿನಂತೆ ರಾಜ್ಯಗಳು ಅಸ್ತಿತ್ವಕ್ಕೆ ಬಂದುವು:

ರಾಜ್ಯಗಳು	ವಿಸ್ತೀರ್ಣ (ಚದರ ಮೈಲುಗಳಲ್ಲಿ)	ಜನಸಂಖ್ಯೆ (ಮಿಲಿಯಗಳಲ್ಲಿ)
ಆಂಧ್ರಪ್ರದೇಶ	೧೧೦,೨೫೦	೩೨·೨
ಅಸ್ಸಾಮ್	೮೪,೯೨೪	೯·೦
ಬಿಹಾರ್	೬೭,೮೫೦	೩೭·೯೩
ಮುಂಬಯಿ	೧೮೮,೨೪೦	೪೭·೮
ಜಮ್ಮು-ಕಾಶ್ಮೀರ	೯೨,೭೮೦	೪·೪
ಕೇರಳ	೧೪,೯೮೦	೧೩·೬
ಮಧ್ಯಪ್ರದೇಶ	೧೭೧,೨೦೦	೨೬·೧
ಮದರಾಸು	೫೦,೧೭೦	೩೦·೦
ಮೈಸೂರು	೭೨,೭೩೦	೧೯·೦
ಒಡಿಸ್ಸ	೬೦,೧೪೦	೧೪·೬
ಪಂಜಾಬ	೪೬,೬೧೬	೧೬·೦
ರಾಜಸ್ಥಾನ	೧೩೨,೩೦೦	೧೬·೦
ಉತ್ತರಪ್ರದೇಶ	೧೧೩,೪೧೦	೬೩·೨
ಪಶ್ಚಿಮ ಬಂಗಾಳ	೩೩,೨೭೯	೨೬·೧೬

೧೯೫೬ನೇ ನವಂಬರ ತಾ. ೧ರಿಂದ ರಾಜ್ಯಗಳೊಳಗಿನ A-B-C ವರ್ಗಭೇದ ಮತ್ತು "ರಾಜಪ್ರಮುಖ" ಪದವಿ ರದ್ದಾಯಿತು. ಮೇಲಿನ ೧೪ ರಾಜ್ಯಗಳಲ್ಲದೆ ಕೇಂದ್ರ ಸರಕಾರದ ಆಡಳಿತದಲ್ಲಿರುವ ೬ ರಾಜ್ಯಗಳಿವು: ೧. ಅಂಡಮಾನ ಮತ್ತು ನಿಕೊಬಾರ ದ್ವೀಪಗಳು. ೨. ಧಿಲ್ಲಿ. ೩. ಹಿಮಾಚಲಪ್ರದೇಶ. ೪. ಲಕ್ಷದ್ವೀಪ-ಅಮಿನ್ ದಿವಿ ದ್ವೀಪಗಳು. ೫. ಮಣಿಪುರ. ೬. ತ್ರಿಪುರ.

ಭೂಮಿ

ಭೂಮಿಯು, ಸೂರ್ಯನ ಸುತ್ತಲೂ (೬೦೦,೦೦೦,೦೦೦ ಮೈಲುಗಳನ್ನು) ದಾರಿಯಾದ ನಿಮಿಷಕ್ಕೆ ೧೦೦೦ ಮೈಲಿನ ವೇಗದಲ್ಲಿ ಸುತ್ತುತ್ತದೆ.

ಜಗತ್ತಿನಲ್ಲಿ ಅತ್ಯಂತ ಜನನಿಬಿಡ ದೇಶವು ಹೊಲ್ಲೆಂಡು. ಅಲ್ಲಿ ಒಂದು ಚದರ ವ್ಯೆಲಿಗೆ ೭೪೩ ಜನರು ವಾಸಿಸುತ್ತಾರೆ.

೧೮೪೭ನೇ ಇಸವಿಯಲ್ಲಿ ಡರ್ಬಿಷೈರಿನಲ್ಲಿ ಒಂದು ಕಲ್ಲಿದ್ದಲು ಗಣಿಯಲ್ಲಿ ಎಣ್ಣೆಯು ಉಕ್ಕಿ ಬರುತ್ತಿದ್ದುದು ಕಂಡುಬಂತು. ಜೇಮ್ಸ್ ಯಂಗ್ ಎಂಬವನು ಆ ಎಣ್ಣೆಯನ್ನು ಪರೀಕ್ಷಿಸುವ ಕೆಲಸವನ್ನು ಕೈಕೊಂಡನು. ಆ ಎಣ್ಣೆಯೇ ಪೆಟ್ರೋಲು.

೧೮೫೯ರಲ್ಲಿ ಎಡ್ವಿನ್ ಎಲ್ ಡ್ರೇಕನ್ ಎಂಬವನು ಮೊದಲನೆಯ ಪೆಟ್ರೋಲು ಬಾವಿಯನ್ನು ತೋಡಿ,ಅದನ್ನು ಪರೀಕ್ಷಿಸಲು ಪ್ರಾರಂಭಿಸಿದನು.

ಜಗತ್ತಿನಲ್ಲಿ ಹೆಚ್ಚಾಗಿ ಭೂಕಂಪಗಳಾಗುವ ದೇಶ ಚಿಲಿ ಎಂಬ ರಾಷ್ಟ್ರ. ಸರಾಸರಿಯಾಗಿ ಚಿಲಿಯಲ್ಲಿ ೧,೦೦೦ ಭೂಕಂಪಗಳಾಗುವಾಗ ಜಪಾನಿನಲ್ಲಿ ೪೩, ಕೆಲಿಫೋರ್ನಿಯದಲ್ಲಿ ೮೮ ಭೂಕಂಪಗಳಾಗುತ್ತವೆ.

ಜ್ವಾಲಾಮುಖಿಗಳಿಂದ ಹರಿಯುವ ಲೋಹ ಕರಗಿದ ನೀರು (ಲಾವ್ಹಾರಸ) ೧೦೦೦ದಿಂದ ೨೦೦೦ ಡಿಗ್ರಿಗಳಷ್ಟು ಬಿಸಿಯಾಗಿರುವುದು. ಕುದಿಯುವ ನೀರಿನ ಉಷ್ಣ ೧೦೦ ಡಿಗ್ರಿ.

ಜಗತ್ತಿನಲ್ಲಿ ಅತ್ಯಂತ ಆಳವಾದ ಕಲ್ಲಿದ್ದಲು ಗನಿಯು ಬೆಲ್ಜಿಯಮಿನಲ್ಲಿದೆ. ಅದರ ಆಳವು ४೦೦೦ ಅಡಿ.

ಕೋಲಾರದ ಬಂಗಾರದ ಗನಿಗಳು ಆಳದಲ್ಲಿ ಜಗತ್ತಿನಲ್ಲಿ ಮೂರನೆಯವುಗಳಾಗಿವೆ. ಅವು ಸುಮಾರು ೭೦೦೦ ಅಡಿ ಆಳವಾಗಿವೆ.

ಮನುಷ್ಯ

ಹುಟ್ಟಿದ ಮೂರು ತಿಂಗಳ ವರೆಗೂ ಎಳೆಯ ಮಕ್ಕಳು ಒಂದೇ ಕಡೆ ದೃಷ್ಟಿ ಇಡಲಾರವು.

ಒಂದು ಘನ ಇಂಚು ರಕ್ತದಲ್ಲಿ ಸುಮಾರು ೧೫೦ ಮಿಲಿಯದಷ್ಟು ಕೆಂಪು ರಕ್ತ ಕಣಗಳಿರುತ್ತವೆ. ಸುಮಾರು ೬೦೦–೭೦೦ ಇಂಥಾ ಕಣಗಳಿಗೆ ಒಂದರಂತೆ ಬಿಳಿಯ ಕಣಗಳಿವೆ.

ಆರೋಗ್ಯವಂತನಾದ ಮಾನವನು ದಿನ ಒಂದಕ್ಕೆ ಸುಮಾರು ೩೪ ಪೌಂಡುಗಳಷ್ಟು ಗಾಳಿ ಸೇವನೆಯನ್ನು ಮಾಡುತ್ತಾನೆ.

೧೪೦ ಪೌಂಡು ಭಾರದ ಮನುಷ್ಯನ ಶರೀರದಲ್ಲಿ ೭ ಸಾಬೂನು ಬಿಲ್ಲೆಗಳಿಗೆ ಬೇಕಾಗುವಷ್ಟು ಕೊಬ್ಬು, ೯೦೦ ಪೆನ್ಸಿಲುಗಳಿಗೆ ಬೇಕಾಗುವಷ್ಟು ಇದ್ದಲಿಧಾತು, ೨,೨೦೦ ಬೆಂಕಿಕಡ್ಡಿಗಳಿಗೆ ಬೇಕಾಗುವಷ್ಟು ರಂಜಕ,

ಲವಣಗಳ ಒಂದು ಡೋಸ್ ಪಾನೀಯಕ್ಕೆ ಬೇಕಾಗುವಷ್ಟು ಮ್ಯಾಗ್ನೇಸಿಯಂ ವಷ್ಟು, ಒಂದು ತಂತಿ ಮೊಳೆಯನ್ನು ತಯಾರಿಸಲು ಬೇಕಾಗುವಷ್ಟು ಕಬ್ಬಿಣ, ಕೋಳಿಯ ಮರಿಗಳ ಗೂಡನ್ನು ಬಳಿಯಲು ಬೇಕಾಗುವಷ್ಟು ಸುಣ್ಣ, ಒಂದು ನಾಯಿಯ ಮೈಮೇಲಿರುವ ಚಿಗಟೆಗಳನ್ನು ನಾಶಪಡಿಸಲು ಬೇಕಾಗುವಷ್ಟು ಗಂಧಕ ಮತ್ತು ಒಂದು ಗೆಲನ್ ನೀರೂ ಇರುತ್ತವೆ.

ಯಂತ್ರ

೩೩,೦೦೦ ರಾತಲು ಭಾರವನ್ನು ಒಂದು ಮಿನಿಟಿನಲ್ಲಿ ಒಂದಡಿ ಎತ್ತರಕ್ಕೆ ಅಥವಾ ೫೫೦ ರಾತಲು ಭಾರವನ್ನು ಒಂದು ಸೆಕೆಂಡಿನಲ್ಲಿ ಒಂದಡಿ ಎತ್ತರಕ್ಕೆ ಎತ್ತಲು ಬೇಕಾಗುವ ಶಕ್ತಿಗೆ "ಒಂದು ಅಶ್ವಶಕ್ತಿ"ಯೆಂದು ಹೆಸರು.

೧೭೯೦ರಲ್ಲಿ ಫ್ರಾನ್ಸಿನ ಸಿವ್‌ರಾಕ್ ಎಂಬವನು 'ಪೆಡ್ಲು' ಇಲ್ಲದ, ಕುದುರೆಯಂತಿರುವ ಮೊತ್ತಮೊದಲನೆಯ ಸೈಕಲನ್ನು ತಯಾರಿಸಿದನು. ಅದು ಇಳಿಜಾರಿನಲ್ಲಿ ಸುಮಾರು ೧೫ ಮೈಲುಗಳ ವೇಗದಲ್ಲಿ ಓಡುತ್ತಿತ್ತು.

೧೮೧೮ರಲ್ಲಿ ಬ್ಯಾರನ್ ಓನ್ ಡ್ರ್ಯಾಗ್ ಎಂಬವನು ಸಿವ್‌ರಾಕನ ಸೈಕಲನ್ನು ಸುಧಾರಿಸಿ, ಮುಂದಿನ ಭಾಗವು ತಿರುಗುವಂತೆ ಮಾಡಿದನು.

ಸ್ಕಾಟ್ಲಂಡಿನ ಕಾರ್ಕ್ ಪ್ಯಾಟ್ರಿಕ್ಸ್ ಮೆಕ್ಮಿಲನ್ ಎಂಬವನು ಅದಕ್ಕೆ 'ಪೆಡ್ಲು' ಎಂಬ ಭಾಗವನ್ನು ಸೇರಿಸಿದನು.

ಫ್ರಾನ್ಸಿನ ಪೇಯರ್ ಮೈಕಾನ್ ಎಂಬವನು ಹಗುರವಾದ ಭಾಗಗಳಿಂದ ಹೊಸ ನಮೂನೆಯ ಸೈಕಲನ್ನು ತಯಾರಿಸಿದನು. ಸ್ವಲ್ಪ ಕಾಲದಲ್ಲಿಯೇ ಜಿ. ಬಿ. ಡನ್‌ಲೊಪ್ ಎಂಬವನು, ಗಾಳಿ ತುಂಬಿದ ಟಾಯರುಗಳನ್ನು ಸೈಕಲಿಗೆ ಉಪಯೋಗಿಸಿ, ಸೈಕಲಿನ ವೇಗವನ್ನು ಹೆಚ್ಚಿಸಿದನು.

ಬರ್ಮಿಂಗ್ಹಾಂ ನಗರದಲ್ಲಿ ಟಿಡ್ ಮತ್ತು ಹ್ಯಾರಿಕೇನ್ ಎಂಬ ಸಹೋದರರಿಂದ ೧೯೧೦ರಲ್ಲಿ ೨೫ ಸವರಿನ್ ಮೂಲಧನದಿಂದ 'ಹೆರ್ಕ್ಯುಲಸ್' ಸೈಕಲು ಕಂಪೆನಿಯು ಸ್ಥಾಪಿಸಲ್ಪಟ್ಟಿತು.

೧೮೧೧ರಲ್ಲಿ ವಿಲ್ಲಿಯಮ್ ಸ್ಮಿಂಗ್ಟನ್ ಎಂಬವನು, ವಾಟನು ರಚಿಸಿದ ಹಬೆಯಂತ್ರವನ್ನು ದೋಣಿಗೆ ಜೋಡಿಸಿ, ಹಬೆಯಂತ್ರದಿಂದ ಹಡಗುಗಳನ್ನು ನಡಿಸಬಹುದೆಂಬದನ್ನು ಕಂಡುಕೊಂಡನು.

೧೮೧೧ರಲ್ಲಿ ಹೆನ್ರಿಬೆಲ್ ಎಂಬವನು ೪೦ ಅಡಿ ಉದ್ದವೂ, ೧೦|| ಅಡಿ

ಅಗಲವೂ ಇರುವ ೩ ಅಶ್ವಶಕ್ತಿಯಿಂದ ಕೂಡಿದ ಮೊದಲನೆಯ ಉಗಿಹಡಗ ವನ್ನು ರಚಿಸಿದನು. ಆ ಹಡಗಕ್ಕೆ 'ಕೊಮೆಟ್' ಎಂದು ಹೆಸರಿಟ್ಟಿದ್ದನು.

ಸುಮಾರು ೧೦೦ ಘನ ಅಡಿ ವಿಶಾಲವುಳ್ಳ ಹಡಗಿನ ಒಳಪ್ರದೇಶವು ಒಂದು ಟನ್ ಗಾತ್ರ ಎನಿಸುವುದು.

ಜೋರ್ಜ ಸ್ಟೀವನ್ಸನ್ ಎಂಬವನು ೧೮೧೫ರಲ್ಲಿ ಹಬೆಯ ಶಕ್ತಿಯಿಂದ ನಡೆಯುವ ಒಂದು ಯಂತ್ರವನ್ನು ತಯಾರಿಸಿ ಅದರಿಂದ ಕಲ್ಲಿದ್ದಲಿಯ ಗಾಡಿಗಳನ್ನು ಎಳೆಯಿಸಲು ಉಪಯೋಗಿಸಿದನು. ಅದನ್ನು ಸುಧಾರಿಸಿ ೧೮೨೫ರಲ್ಲಿ ಅವನು ಹಬೆಗಾಡಿಯನ್ನು ತಯಾರಿಸಿದನು.

ಸ್ಟಾಕನ್ ಮತ್ತು ಡಾರ್ಲಿಂಗ್ಟನ್ ಎಂಬ ಎರಡು ಪಟ್ಟಣಗಳ ನಡುವೆ ಮೊತ್ತಮೊದಲನೆಯ ರೈಲುಗಾಡಿ ಓಡಿತು. ಆ ಯಂತ್ರವನ್ನು ಈಗಲೂ ಡಾರ್ಲಿಂಗ್ಟನ್ ನಿಲ್ದಾಣದಲ್ಲಿ ಕಾಣಬಹುದು.

ಹೆನ್ರಿಫೋರ್ಡನ ಪ್ರಥಮ ಮೋಟರು ೧೮೯೩ರಲ್ಲಿ ರಚಿಸಲ್ಪಟ್ಟಿತು. ಆಗ ಅದರ ಆಕಾರವು ಮೋಟಾರು ಸೈಕಲಿನಂತಿದ್ದು, ನಾಲ್ಕು ಚಕ್ರಗಳುಳ್ಳದ್ದಾಗಿತ್ತು.

೧೨—೮—೧೮೫೧ರಲ್ಲಿ ಅಮೇರಿಕದ ಇಸಾಕ್ ಮೆರಿ ಸಿಂಗರ್ ಎಂಬವನು ಹೊಲಿಯುವ ಸಿಂಗರ್ ಯಂತ್ರವನ್ನು ತಯಾರಿಸಿದನು.

ಡೀಸಲ್ ಎಂಜಿನನ್ನು ಡಾ| ರುಡೋಲ್ಫ್ ಡೀಸಲ್ ಎಂಬವನು ಸಂಶೋಧಿಸಿದುದರಿಂದ ಅದಕ್ಕೆ ಆ ಹೆಸರು ಬಂತು.

ವಿಜ್ಞಾನ

೧೮೬೪ರಲ್ಲಿ ಕ್ಲಾರ್ಕ ಮ್ಯಾಕ್ಸವೆಲ್ ಎಂಬವನು ವಿದ್ಯುತ್‌ತರಂಗಗಳನ್ನು ವಾತಪ್ರದೇಶದಲ್ಲಿ ಹುಟ್ಟಿಸಬಹುದೆಂಬುದನ್ನು ಕಂಡುಕೊಂಡನು. ಮುಂದಕ್ಕೆ ಅದೇ ರೇಡಿಯೋ ಸಂಶೋಧನೆಗೆ ಮೂಲವಾಯಿತು.

ಜೋಸೆಫ್ ಲಿಸ್ಟರ್ ಎಂಬ ಗ್ಲಾಸ್ಗೋ ನಗರದ ಶಸ್ತ್ರಚಿಕಿತ್ಸಕನು ೧೮೬೫ರಲ್ಲಿ ಅಣುಜೀವಿಗಳಿಗೆ ಪ್ರತಿಬಂಧಕವಾದ ಕಾರ್ಬೋಲಿಕ್ ಎಸಿಡನ್ನು ಉಪಯೋಗಿಸುವ ಕ್ರಮವನ್ನು ಕಂಡುಕೊಂಡನು.

ಲೂಯಿ ಪಾಶ್ಚರನೆಂಬ ಫ್ರೆಂಚರವನು ಗಾಳಿಯಲ್ಲಿಯೂ ಅಣುಜೀವಿಗಳಿರುತ್ತವೆಂಬುದನ್ನು ಕಂಡುಕೊಂಡನು. ರೋಗಕ್ಕೆ ಕಾರಣೀಭೂತವಾದ ಕ್ರಿಮಿಗಳನ್ನು ಸ್ವಲ್ಪವಾಗಿ ರೋಗಿಯ ರಕ್ತದಲ್ಲಿ ಬಿಟ್ಟರೆ ಕೆಲ

ರೋಗಗಳು ನಿವಾರಣೆಯಾಗುತ್ತವೆಂಬುದನ್ನು ಕಂಡುಕೊಂಡ ಅವನು ನಾಕ ಹಾಕುವ ಪದ್ಧತಿಯನ್ನು ಬಳಕೆಯಲ್ಲಿ ತಂದನು.

ಮೊತ್ತಮೊದಲನೆಯ ಬ್ರಾಡ್‌ಕಾಸ್ಟಿಂಗ್ ಸ್ಟೇಶನು ೧೯೧೯ರಲ್ಲಿ ಇಂಗ್ಲೆಂಡಿನಲ್ಲಿ ಚೆಲ್ಮ್ಸ್‌ಫೋರ್ಡ್ ಎಂಬಲ್ಲಿ ಸ್ಥಾಪಿಸಲ್ಪಟ್ಟಿತು.

ಅಲೆಗ್ಝಾಂಡರ್ ಬೆಲ್ ಎಂಬವನು ೧೮೭೬ರಲ್ಲಿ ಟೆಲಿಫೋನನ್ನು ನಿರ್ಮಿಸಿದನು.

೧೭೮೪ರಲ್ಲಿ ಆರ್ಗಂಡ್ ಎಂಬ ಸ್ವಿಜರ್ಲೆಂಡಿನ ಬುದ್ಧಿವಂತನೊಬ್ಬನು ದೀಪದ ಹೊರಗೆ ಗಾಜಿನ ನಳಿಗೆಯನ್ನು ಇರಿಸಿದರೆ ಹೆಚ್ಚಿನ ಪ್ರಕಾಶವು ಸಿಕ್ಕುತ್ತದೆಂಬುದನ್ನು ಕಂಡುಕೊಂಡನು.

ಡಾ| ಫಿಲಿಪ್ ಡಿ. ವಿಲ್ಸನ್ ಎಂಬವನು ಮೂಳೆಗಳನ್ನು ಶೀತಾವರಣದಲ್ಲಿಟ್ಟರೆ ಅವು ಕೆಡದಂತೆ ಬಹುಕಾಲವಿಡಲು ಸಾಧ್ಯವಾಗುವುದೆಂಬುದನ್ನು ಕಂಡುಕೊಂಡನು.

ಸಂಕೇತಗಳು

ಒಂದೊಂದು ದೇಶಕ್ಕೆ ಒಂದೊಂದು ಸಂಕೇತವಿದೆ.

ಆಸ್ಟ್ರೇಲಿಯಾ—ಕಂಗರು.	ಬ್ರಿಟೈನ್—ಸಿಂಹ.
ಬರ್ಮ—ನವಿಲು.	ಸಿಲೋನ್—ಆನೆ.
ಚೈನಾ—ಡ್ರೆಗನ್.	ಜರ್ಮನಿ—ಗಿಡುಗ.
ಇಂಡಿಯಾ—ದನ.	ರಷ್ಯಾ—ಕರಡಿ.
ಸಯಾಂ—ಬಿಳಿ ಆನೆ.	ದ. ಆಫ್ರಿಕ—ಸ್ಪ್ರಿಂಗ್‌ಬೋಕ್.

ದೇಶಗಳೂ ಜನರೂ

ಸ್ಪೈನ್—ಸ್ಪೆನಿಯಾರ್ಡರು.	ಹೊಲ್ಲೆಂಡು—ಡಚ್ಚರು.
ಫ್ರಾನ್ಸ್—ಫ್ರೆಂಚರು.	ಸ್ವಿಸರ್ಲೆಂಡು—ಸ್ವಿಸ್ಸರು.
ಡೆನ್ಮಾರ್ಕ್—ಡೇನರು.	ಸ್ವೀಡನ್—ಸ್ವೀಡರು.
ನೋರ್ವೆ—ನೊರ್ವೆಜಿಯಾನರು.	ಪೋಲೆಂಡ್—ಪೋಲರು.
ಮೊರಕ್ಕೋ—ಮೂರರು.	ಸಿಲೋನ್—ಸಿಂಹಳೀಯರು.
ಬ್ರಿಟನ್—ಬ್ರಿಟಿಷರು.	ಭಾರತ—ಭಾರತೀಯರು.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗ
ತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ
1954ನೇ ಸಪ್ಟಂಬರದಿಂದ 1957ನೇ ಜೂನ್ ತಿಂಗಳ ಎರಡನೆಯ
ವಾರದ ವರೆಗೆ 140 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾ
ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

140 ಅಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು
2942 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟ
ಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ
ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋ
ವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ
ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ
ವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು
ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ-ಉ
ಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋ
ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers, Ltd., Mangalore.